







ನೋಡಿಕೊಳ್ಳಲಾಗಿದೆ. ಹುಲ್ಲು ಹಾಸಿನಮೇಲೆ ಓಡಾಡುತ್ತಾ ಗುಲಾಬಿಗಳ ಸೌಂದರ್ಯವನ್ನು ಸವಿಯಲು ಯಾವುದೇ ನಿರ್ಬಂಧವಿಲ್ಲ. ಗುಲಾಬಿ ಗಿಡದ ಕ್ರಮ ಸಂಖ್ಯೆ, ತಳಿ, ನೆಟ್ಟ ವರ್ಷ ಹಾಗೂ ವಿಶೇಷತೆಗಳ ಮಾಹಿತಿಯುಳ್ಳ ಫಲಕಗಳು ಪ್ರತೀ ಪೊದೆಯ ಮುಂದೆ ನೆಡಲಾಗಿದೆ. ಪೂರ್ತಿ ಪಾರ್ಕನ್ನು ವೀಕ್ಷಿಸಲು ಕನಿಷ್ಠ ಮಾರ್ನಾಲ್ಕು ತಾಸುಗಳಾದರೂ ಬೇಕು. ಸಂಜೆ ಸಮಯದಲ್ಲಿ ವಾಯುವಿಹಾರಕ್ಕೆ ಬರುವ ವಯೋವೃದ್ಧರ ಹಾಗೂ ಯುವಪ್ರೇಮಿಗಳ ನೆಚ್ಚಿನ ಉದ್ಯಾನವನ ಅದಾಗಿದೆ. ಪ್ರತೀವರ್ಷ ವಿವಿಧ ದೇಶಗಳ ಗುಲಾಬಿ ಬೆಳೆಗಾರರು ಅಲ್ಲಿಗೆ ಬಂದು, ಅಲ್ಲಿ ಬೆಳೆಯುವ ತಳಿಗಳ ಮಾಹಿತಿಯನ್ನು ಪಡೆದುಕೊಳ್ಳುವುದು ಉದ್ಯಾನವನದ ಹಿರಿಮೆಗೆ ಸಾಕ್ಷಿಯಾಗಿದೆ.

ಪಾರ್ಕ್‌ನ ಒಂದು ಭಾಗದಲ್ಲಿರುವ ವಿಶಾಲವಾದ ಕೊಳದಲ್ಲಿ ಸ್ವಚ್ಛಂದವಾಗಿ ವಿಹರಿಸುತ್ತಿರುವ ಬಾತುಕೋಳಿಗಳು, ಹಿನ್ನೆಲೆಯಲ್ಲಿರುವ ಡಚ್ ಶೈಲಿಯ ಆಕರ್ಷಕ ಮನೆಗಳು ನೋಡುಗರನ್ನು ಮಂತ್ರಮುಗ್ಧರನ್ನಾಗಿಸುತ್ತವೆ. ಪಾರ್ಕ್‌ನ ಹಲವೆಡೆ ಸ್ಥಾಪಿಸಲಾಗಿರುವ ಕಲ್ಲಿನ ಶಿಲ್ಪಗಳು ಹಾಗೂ ಸಮಕಾಲೀನ ಕಲಾಕೃತಿಗಳು ಪ್ರವಾಸಿಗರ ಮನಸೆಳೆಯುವಲ್ಲಿ ಯಶಸ್ವಿಯಾಗಿವೆ. ಶಿಲ್ಪಗಳ ಕೆಳಭಾಗದಲ್ಲಿ ವಿವರಗಳಿದ್ದು, ಆಸಕ್ತರಿಗೆ ಅವಶ್ಯಕ ಮಾಹಿತಿಯನ್ನು ಒದಗಿಸುತ್ತವೆ.

ಕಾಲುವೆಗಳಿಂದ ಆವೃತವಾಗಿರುವ ಅತ್ಯಂತ ಸುಂದರ ಉದ್ಯಾನವನವೆಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಉದ್ಯಾನವನದ ಹಿಂಭಾಗದಲ್ಲಿ, ಮರಗಿಡಗಳ ಸುಂದರ ಪ್ರಕೃತಿಯ ನಡುವೆ ಹೋಟೆಲ್ ಇದೆ. ಅಲ್ಲಿ ದಣಿದು ಬಂದ ವೀಕ್ಷಕರಿಗೆ ತಂಪು ಪಾನೀಯಗಳು ಹಾಗೂ ಹಲವು ಬಗೆಯ ಖಾದ್ಯಗಳು ಲಭ್ಯ. ರುಚಿಕರವಾದ ಊಟವನ್ನು ಸವಿಯಲೆಂದೇ ಕೆಲವರು ಅಲ್ಲಿಗೆ ಬರುತ್ತಾರೆ. ದೋಣಿಯಲ್ಲಿ ವಿಹರಿಸುತ್ತಾ ಗುಲಾಬಿ ಉದ್ಯಾನವನದ ಸೌಂದರ್ಯವನ್ನು ಸವಿಯಲು ಅವಕಾಶವಿದೆ.

ವಿಶಾಲವಾದ ಪಾರ್ಕಿಂಗ್ ಪ್ರದೇಶವನ್ನು ಹೊಂದಿರುವ ಗುಲಾಬಿ ಉದ್ಯಾನವನದಲ್ಲಿ ಮಕ್ಕಳು ಆಟವಾಡಿ ಆನಂದಿಸಲು ಮಕ್ಕಳ ಪ್ರತ್ಯೇಕ ಪಾರ್ಕ್ ಸಹ ಇದೆ. ಹಿರಿಯರು ಕಲ್ಲುಬೆಂಚುಗಳಲ್ಲಿ ಕುಳಿತುಕೊಂಡು ತಮ್ಮ ಮಕ್ಕಳು ಆಟವಾಡುವುದನ್ನು ನೋಡಿ ಸಂತೋಷಪಡಬಹುದು. ಮುಂಜಾನೆ ಮತ್ತು ಸಂಜೆಯ ವೇಳೆ ಉದ್ಯಾನವನಕ್ಕೆ ಭೇಟಿನೀಡಲು ಅತ್ಯುತ್ತಮ ಸಮಯವಾಗಿದೆ.

ಭಾರತದಿಂದ ವಿಮಾನದಲ್ಲಿ 'ಆಮ್‌ಸ್ಟರ್ ಡ್ಯಾಂ' ತಲುಪಲು ಹಲವು ಮಾರ್ಗಗಳಿವೆ. ಅಲ್ಲಿಂದ 'ಹೇಗ್' ಪಟ್ಟಣಕ್ಕೆ ಕೇವಲ 40 ನಿಮಿಷ ಪ್ರಯಾಣ. ಸಾಕಷ್ಟು ರೈಲುಗಳಿವೆ. 'ಹೇಗ್'ನಿಂದ ಕೇವಲ 5 ಕಿ.ಮೀ. ದೂರದಲ್ಲಿರುವ 'ಸ್ಕೇವೆನಿನ್'ನ 'ವೆಸ್ಟ್ ಬ್ರೂಕ್ ಪಾರ್ಕ್'ಗೆ ಟ್ರಾಮ್ ಹಾಗೂ ಬಸ್ ಸೌಕರ್ಯವಿದೆ. ಐದಾರು ನಿಮಿಷಗಳ ಪ್ರಯಾಣವಷ್ಟೇ.

ನೆದರ್ಲೆಂಡ್‌ನ ಪಾರಂಪರಿಕ ಹಾಗೂ ಪ್ರಮುಖ ಕಟ್ಟಡಗಳ ಚಿಕಣಿ ಮಾದರಿಗಳ ಥೀಮ್ ಪಾರ್ಕ್ 'ಮಡುರೋಡಮ್', ಸಮುದ್ರ ಜೀವಿಗಳ ಹಾಗೂ ಮೀನುಗಾರರ ಬದುಕಿಗೆ ಸಂಬಂಧಿಸಿದ 'ಮ್ಯೂಸೀ ಸ್ಕೇವೆನಿನ್', ಸಮಕಾಲೀನ ಕಲಾಕೃತಿಗಳ ಮ್ಯೂಸಿಯಂ 'ಬೀಲ್ಡನ್ ಆನ್ ಜೀ', ಟಾಮ್ ಒಟೆರ್ನೆಸ್ ರಚಿಸಿರುವ 23 ಕಾಲ್ಪನಿಕ ಕಥಾಶಿಲ್ಪಗಳುಳ್ಳ ಆಕರ್ಷಕ 'Wಕುಹೌರ್ಸ್ ಬೀಚ್' ಮೊದಲಾದ ಅಕರ್ಷಣೆಗಳು ಕೇವಲ 2 ಕಿ.ಮೀ. ಸುತ್ತಳತೆ ದೂರದಲ್ಲಿವೆ. ಉಳಿದುಕೊಳ್ಳಲು ಹಲವು ದರ್ಜೆಗಳ ಹೋಟೆಲ್‌ಗಳಿದ್ದು, ಡಚ್ ಹಾಗೂ ಭಾರತೀಯ ಶೈಲಿಯ ಖಾದ್ಯಗಳು ಲಭ್ಯವಿರುತ್ತವೆ. ■